ಶ್ರೀ ಜಿ.ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಗುಬ್ಬಿಗ ರೇಂಜ್ ೯೭ ಕೂಪಿನಲ್ಲಿ ತೆಗೆದ ಅರಣ್ಯ ಉತ್ಪನ್ನಗಳ ವಿವರ ಈ ಕೆಳಕಂಡಂತಿದೆ.

ವಿವರ	ಒಟ್ಟು ತಯಾರಾದ ಅರಣ್ಯ ಉತ್ಪನ್ನಗಳು (ಘ. ಮೀ. ಗಳಲ್ಲಿ)
೧) ನಾಟ.	೫೩೧.೩೭೮
೨) ಕಾದಿರಿಸಿದ ಜಾತಿಯ ಸೌದೆ.	೭೧.೯೦೦
೩) ಇತರ ಜಾತಿಯ ಸೌದೆ.	೪೫೯.೬೦೦
೪) ಎಳೆಗಳು	೧೪೧ ನಂ.

ಆ) ಈ ಕೂಪನ್ನು ಮೈಸೂರ್ ಪೇಪರ್ ಮಿಲ್ಸ್‌ನವರೇ ಗುತ್ತಿಗೆ ತೆಗೆದುಕೊಂಡಿದ್ದು, ಅಲ್ಲಿ ಉತ್ಪತ್ತಿಯಾದ ೪೫೯.೬೦೦ ಘ. ಮೀ. ಸೌದೆಯನ್ನು ಅವರಿಗೆ ಬಿಟ್ಟು ಕೊಡಲಾಗಿದೆ. ಇದರ ಬೆಲೆ ರೂ.೨,೨೫,೫೯೮.೬೫ (ತೆರಿಗೆ ಸೇರಿ).

ಇ) ಈ ಕೂಪಿನಲ್ಲಿ ಯಾವ ತರಹದ ಅಕ್ರಮಗಳು ನಡೆದಿರುವ ಬಗ್ಗೆ ವರದಿ ಬಂದಿಲ್ಲ.

ವರಾಹಿ ಯೋಜನೆಯ ಅರಣ್ಯದಿಂದ ಸಿಕ್ಕ ಮರಗಳ ಕುರಿತು

೬೮೦. ಶ್ರೀ ಬಿ.ಎ. ಉಮರಬ್ಬ (ವಿಟ್ಲ). — ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರಾಹಿ ಯೋಜನೆ ಅರಣ್ಯ ವೃತ್ತದಲ್ಲಿರುವ ವರಾಹಿ ಅರಣ್ಯ ಸಂರಕ್ಷಣಾ ವಿಭಾಗದ ಸಾರ್ವಳಿ ರೇಂಜಿನ ೧೨ಳನೇ ಕೂಪಿನಿಂದ ಬಿಡುಗಡೆಯಾದ ಕಟ್ಟಿಗೆ ಮತ್ತು ಮರದ ಪ್ರಮಾಣವೆಷ್ಟು? ೧೨ಳನೇ ಕೂಪ್ ಪ್ರಾರಂಭಗೊಂಡ ತಾರೀಖಿನಿಂದ)

ಆ) ಶಿರ್ವಾಳಿ ರೇಂಜ್ ೧೨ಳನೇ ನಂ. ಕೂಪಿನಿಂದ ಬಿಡುಗಡೆಯಾದ ಅರಣ್ಯ ಉತ್ಪನ್ನಗಳ ಮೇಲೆ ಸರ್ಕಾರಕ್ಕೆ ಬರಬೇಕಾಗಿರುವ ಹಣದ ಮೊತ್ತವೆಷ್ಟು?

ಶ್ರೀ ಜಿ.ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಶಿರ್ವಾಳಿ ವಲಯದ ಕೂಪ್ ನಂ. ೧೨ಳರಲ್ಲಿ ಕೂಪಿನ ಗುತ್ತಿಗೆದಾರರು ತಯಾರಿಸಿದ ಮತ್ತು ಸಾಗಿಸಿದ ಅರಣ್ಯ ಉತ್ಪನ್ನಗಳ ವಿವರ ಕೆಳಗಿನಂತಿದೆ.—

	ನಾಟ	ಸೌದೆ
ತಯಾರಿಸಿದ ಅರಣ್ಯ ಉತ್ಪನ್ನಗಳು (ಘನ ಮೀಟರುಗಳಲ್ಲಿ)	೧೪೧.೩೭೯	೩೮೧.೫೦೦
ಸರ್ಕಾರಿ ಡಿಪೋಗೆ ಸಾಗಿಸಿದ್ದು (ಘ.ಮೀ.ಗಳಲ್ಲಿ ಸರ್ಕಾರಕ್ಕೆ ಕಾದಿರಿಸಿದ ನಾಟಾ ಮತ್ತು ಉರುವಲು)	೧೮.೧೪೭	೩೬೫.೨೦೦
ಗುತ್ತಿಗೆದಾರರಿಗೆ ಬಿಟ್ಟಿರುವುದು	೧೨೩.೨೩೨	೩೪೫೫.೩೦೦

ಆ) ಗುತ್ತಿಗೆದಾರರಿಂದ ಸದರೀ ಕೂಪಿನ ಬಾಬ್ತು ಕಂತಿನ ಹಣ ರೂ. ೮೬,೨೭೪-೦೦ ಹಾಗೂ ರೂ. ೪೧,೬೩೮-೬೫ ಬಡ್ಡಿ ಒಟ್ಟು ರೂ. ೧೨,೭೨,೯೧೨-೬೫ಗಳೂ ೩೧-೮-೮೭ಕ್ಕೆ ಬಾಕಿ ಇರುತ್ತದೆ.